AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

# ನವೋದಯ ಕಾವ್ಯ ಮತ್ತು ಮಾನವತಾವಾದ

**ಡಾ. ವೈ. ಎ. ದೇವಋಷಿ**
ಸಹ ಪ್ರಾಧ್ಯಾಪಕರು
ಸಿ. ಬಿ. ಕಾಲೇಜು ಭಾಲ್ಕಿ.
ಬೀದರ ಜಿಲ್ಲೆ. 585328
ಕರ್ನಾಟಕ ರಾಜ್ಯ

ಸಾವಿರ ವರ್ಷಕ್ಕೂ ಮಿಗಿಲಾದ ಲಿಖಿತ ಇತಿಹಾಸವುಳ್ಳ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಕಾಲಕ್ಕನುಗುಣವಾಗಿ ವಿಭಿನ್ನ ವಸ್ತು, ರೂಪ, ಭಾಷೆ, ಆಶಯ, ಆಕೃತಿ, ಸತ್ವ, ಸಂವೇದನೆ, ದೃಷ್ಟಿ, ಧೋರಣೆಗಳನ್ನೊಳಗೊಂಡ ಸಾಹಿತ್ಯ ಸಂಪ್ರದಾಯಗಳು ತಲೆದೋರುತ್ತ ಬಂದಿವೆ. 18ನೆಯ ಶತಮಾನದ ಅಂತ್ಯ ಮತ್ತು 19ನೆಯ ಶತಮಾನದ ಪ್ರಾರಂಭದಲ್ಲಿ ಆಂಗ್ಲ ಶಿಕ್ಷಣದ ಪರಿಣಾಮವಾಗಿ ಭಾರತೀಯ ಅನೇಕ ಜನರು ಆಂಗ್ಲ ಸಾಹಿತ್ಯವನ್ನು ಅಭ್ಯಸಿಸುವುದರ ಮೂಲಕ ಸಾಹಿತ್ಯ ರಚನೆಯಲ್ಲಿ ತೊಡಗಿದರು. ಹೀಗಾಗಿ 19ನೆಯ ಶತಮಾನವನ್ನು ಆಧುನಿಕ ಕನ್ನಡ ಸಾಹಿತ್ಯದ ಉದಯಕಾಲ ಎಂದು ಹೇಳಲಾಗುತ್ತದೆ. ಇಲ್ಲಿ ಆಂಗ್ಲ ಶಿಕ್ಷಣದ ಪ್ರಭಾವ ಇದ್ದರೂ ಕೂಡ ಕನ್ನಡ ಸಾಹಿತ್ಯ ಪ್ರಾಚೀನ ಭಾರತದ ಸಾಹಿತ್ಯ ಪರಿಕಲ್ಪನೆಗಳನ್ನು ಬಿಟ್ಟುಕೊಡಲಿಲ್ಲ. ಪ್ರಾಚೀನ ಭಾರತದ ಕಾವ್ಯ, ಕಥನಗಳಿಗೆ ರಮ್ಯವಾದದ ನೆಲೆಯಲ್ಲಿ ಹೊಸ ಆವಿಷ್ಕಾರ ನೀಡಲಾಯಿತು. ಕಾವ್ಯ, ನಾಟಕ, ಕಾದಂಬರಿ ಮೊದಲಾದವುಗಳು ಈ ಹಿನ್ನೆಲೆಯಲ್ಲಿ ರಚನೆಯಾದವು.

ಇಂಗ್ಲಿಷ ರಮ್ಯವಾದದ ಪ್ರಭಾವದಿಂದ ಕನ್ನಡದಲ್ಲಿ ನವೋದಯ ಪ್ರಾರಂಭವಾಯಿತು. ಈ ರಮ್ಯವಾದ ಸಾಹಿತ್ಯ ಪುನರುಜ್ಜೀವನಗೊಂಡದ್ದು ಇಂಗ್ಲಿಷರಿಂದಲೆ. ಇವರು ಕಾವ್ಯದಲ್ಲಿ ಕಥನ ಸಂಪ್ರದಾಯವನ್ನು ವಿರೋಧಿಸಿ ಭಾವಗೀತೆಗೆ ನಾಂದಿ ಹಾಡಿದರು. ಸುನೀತ ಮತ್ತು ಪ್ರಗಾಥಗಳನ್ನು ಪ್ರಚಾರಪಡಿಸಿದರು. ಬ್ಲೇಕ್, ಬರ್ನ್ಸ್, ವರ್ಡ್ಸವರ್ಥ, ಕೊಲರಿಜ್, ಬೈರೆನ್, ಶೆಲ್ಲಿ, ಕಿಟ್ಸ್ ಮೊದಲಾದವರು ಈ ರಮ್ಯವಾದದ ಪುನರುಜ್ಜೀವನ ಚಳುವಳಿಯಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡರು. ಆಧುನಿಕ ಕನ್ನಡ ಸಾಹಿತ್ಯದಲ್ಲಿಯೂ ಕೂಡ ಇದು ಪ್ರಾರಂಭವಾಯಿತು. 1870 ರಿಂದ 1940 ರ ವರೆಗಿನ ಅವಧಿಯನ್ನು 'ನವೋದಯ ಯುಗ' ವೆಂದು ಗುರುತಿಸಲಾಗಿದೆ. 1920 ರಿಂದ ಅಂ–ದರೆ ಬಿ.ಎಂ.ಶ್ರೀಯವರ 'ಇಂಗ್ಲಿಷ ಗೀತೆಗಳು' ಕವನ ಸಂಕಲನ ಬಂದ ನಂತರವೇ ಕನ್ನಡದಲ್ಲಿ 'ನವೋದಯ ಯುಗ' ಪ್ರಾರಂಭವಾಯಿತು. ರವೀಂದ್ರನಾಥ ಠಾಗೋರ, ಮಹಾತ್ಮಾಗಾಂಧಿ, ಶ್ರೀರಾಮಕೃಷ್ಣ ಪರಮಹಂಸ, ಶ್ರೀ ಅರವಿಂದ ಮತ್ತು ರಮಣ ಮಹರ್ಷಿಯವರ ಸಾಮಾಜಿಕ, ರಾಜಕೀಯ, ಆಧ್ಯಾತ್ಮಿಕ ಮತ್ತು ಅನುಭಾವಿಕ ಚಿಂತನೆಗಳು ನವೋದಯ ಕಾವ್ಯದ ಮೇಲೆ ಪ್ರಭಾವ ಬೀರಿದ್ದನ್ನು ಗುರುತಿಸಬಹುದಾಗಿದೆ.

1921 ರಲ್ಲಿ ಪ್ರಕಟವಾದ ಬಿ.ಎಂ.ಶ್ರೀಯವರ 'ಇಂಗ್ಲಿಷ ಗೀತೆಗಳು' ಈ ನಿಟ್ಟನಲ್ಲಿ ತುಂಬ ಮಹತ್ವದ ಕೃತಿ. ಆದರೆ ಬಿ.ಎಂ.ಶ್ರೀಯವ–ರಿಗಿಂತ ಮೊದಲು ಇಂಗ್ಲಿಷ ಕವಿತೆಗಳನ್ನು ಕನ್ನಡಕ್ಕೆ ತಂದವರಲ್ಲಿ ಉತ್ತರ ಕರ್ನಾಟಕದ ಹಟ್ಟಿಂಗಡಿ ನಾರಾಯಣರಾಯರು ಪ್ರಮುಖರಾಗಿದ್ದಾರೆ. ಕಾಲಿನ್ಸ್, ಕೀಟ್ಸ್, ವರ್ಡ್ಸವರ್ಥ ಮೊದಲಾದ ಇಂಗ್ಲಿಷ ಕವಿಗಳ ಕವಿತೆಗಳನ್ನು ನಾರಾಯಣರಾಯರು ಅನುವಾದಿಸಿ 'ಆಂಗ್ಲ ಕವಿತಾವಳಿ' ಎಂಬ ಹೆಸರಿನಿಂದ ಹೊರತಂದರು.

ಪಂಜೆ ಮಂಗೇಶರಾಯ ಹಾಗೂ ಗೋವಿಂದ ಪೈ ಅವರ ಕಾವ್ಯಗಳು ಕೂಡ ನವೋದಯದ ಅಂಶಗಳನ್ನು ಒಳಗೊಂಡಿದ್ದು, ಶಿಲ್ಪದಲ್ಲಿ ಮಾತ್ರ ಬೇರೆಯಾಗಿ ನಿಲ್ಲುತ್ತವೆ. ಪಂಜೆಯವರ 'ತೆಂಕಣ ಗಾಳಿಯಾಟ' ಮತ್ತು ಗೋವಿಂದ ಪೈಯವರ 'ಹೊಲೆಯನ ಕವಿತೆಗಳು' ಗಮನಿಯವಾದ ಬದಲಾವಣೆಗಳನ್ನು ಉಂಟು ಮಾಡಿದ್ದು ಸುಳ್ಳಲ್ಲ. "ಕನ್ನಡ ನಾಡಿನ ಬದುಕಿನಲ್ಲಿ ಬೇರು ಬಿಟ್ಟ ಕನ್ನಡ ಸ್ವಂತಿಕೆಯಲ್ಲಿ ಹೊಸಗನ್ನಡ ಕಾವ್ಯವನ್ನು ಹುಟ್ಟು ಹಾಕಿದ ಕೀರ್ತಿ ನಿಜವಾಗಿಯೂ ಪಂಜೆಯವರಿಗೆ ಸಲ್ಲಬೇಕು"[1] ಎಂದು ಹೇಳಲಾಗುತ್ತದೆ. ನವೋದಯ ಕಾವ್ಯದ ವಸ್ತು ಪ್ರೇಮ, ಪ್ರೀತಿ ಮಾತ್ರವಲ್ಲದೆ ಸಾಮಾಜಿಕ ಸಮಾನತೆ ಮತ್ತು ವೈಜ್ಞಾನಿಕ ದೃಷ್ಟಿಕೋನ ಕೂಡ ಆಗಿರುತ್ತದೆ. ಬೇಂದ್ರೆ, ಕುವೆಂಪು, ಪು.ತಿ.ನ., ಕಡೆಂಗೊಡ್ಲು ಶಂಕರಭಟ್ಟರು ಮುಂತಾದವರು ನವೋದಯ ಕಾವ್ಯದ ಪ್ರಮುಖ ಕವಿಗಳು. ನವೋದಯ ಕಾವ್ಯದಲ್ಲಿ ಮಾನವತಾವಾದ ಬಹು ಸಹಜವಾಗಿಯೇ ಬಂದಿದೆ. "ನವೋದಯ ಅನ್ನುವುದು ವಿಶಾಲಾರ್ಥದಲ್ಲಿ ಭಾರತದ ರಾಜಕೀಯ, ಸಾಮಾಜಿಕ, ಧಾರ್ಮಿಕ ಹಾಗೂ ಒಟ್ಟಾರೆಯಾಗಿ ಸಾಂಸ್ಕೃತಿಕ ಪುನರುಜ್ಜೀವನವನ್ನು ನವೋದಯ ಪದ ಸೂಚಿಸುತ್ತದೆ

ಪಂಜೆ ಮಂಗೇಶರಾಯರ ಕಾವ್ಯರಚನಾ ಸಂದರ್ಭದ ಕಾಲ ಬಹಳ ಮಡಿ ಮೈಲಿಗೆಗಳಿಂದ ತುಂಬಿಹೋಗಿತ್ತು. ಕನ್ನಡವೆಂದರೆ ಮೂಗು ಮುರಿಯುತ್ತಿದ್ದ ಆ ಕಾಲದಲ್ಲಿ ಸಂಸ್ಕೃತ ಮತ್ತು ಆಂಗ್ಲ ಭಾಷೆಗಳ ಪ್ರಚುರತೆ ಸಾಕಷ್ಟಿದ್ದಿತು. ದೇಶ ಗುಲಾಮಗಿರಿಯಲ್ಲಿ ಬಿದ್ದಿರುವುದರ ಜೊತೆಗೆ ಇಲ್ಲಿಯ ಸಾಮಾಜಿಕ ಸಮಸ್ಯೆಗಳು ಬಹು ದಟ್ಟವಾಗಿ ಆವರಿಸಿದ್ದವು. ಚಲನಾರಹಿತವಾದ ಅಥವಾ ಪರಿವರ್ತನಾ ರಹಿತವಾದ ಜಡತ್ವವನ್ನು ರೂಢಿಸಿಕೊಂಡಿದ್ದ ಕಾಲದಲ್ಲಿ ಪಂಜೆಯವರ ಕಾವ್ಯಸೃಷ್ಟಿ ಆರಂಭಗೊಂಡದ್ದನ್ನು ಕಾಣಬಹುದು. ಅವರ 'ಹೊಲೆಯನ ಹಾಡು' ಎಂಬ ಕವಿತೆ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಇರುವ ಜಾತಿಯತೆಯನ್ನು ವಿಡಂಬಿಸುತ್ತದೆ.

"ಉಳ್ಳಯ್ಯ ದಯಗೊಳ್ಳಯ್ಯ
ದಿಟ್ಟ ದಿಕ್ಕಾ ಮಾರಿ ಮುಂಡಾಳ
ಹುಟ್ಟು ಹೊಲೆಯಾ/ಪೊಲಾ/ಚಂಡ ಚಾಂಡಾಲಾ
ಬೊಟ್ಟಿ ಬುಗ್ಗುರೆ ಎಂದು ಹೆಸರೆತ್ತಿ ಕೂಗಿ
ಮುಟ್ಟಲಂಜುವೆ ನಿಲ್ವೆ ದೂರಕ್ಕೆ ಹೋಗಿ"[2]

–ಪಂಜೆ ಮಂಗೇಶರಾಯ

ಕವಿ ಇಲ್ಲಿ ಆ ಕಾಲದ ಜಾತಿಯತೆಯ ಬಿಗಿ ಹಿಡಿತವನ್ನು ಈ ಮೂಲಕ ಹೇಳಲೆತ್ನಿಸುತ್ತಾರೆ. ವೈಯಕ್ತಿಕವಾಗಿ ಅವರು ಮೇಲ್ಜಾತಿಗೆ

ಸಂಬಂಧಪಟ್ಟಿದ್ದರೂ ಕೂಡಾ ಅವರು ಆ ವ್ಯವಸ್ಥೆಯ ವಿರುದ್ಧ ದಿಕ್ಕಿನಲ್ಲಿ ನಡೆಯುತ್ತಾರೆ. ಜೊತೆಗೆ ಮೇಲ್ಜಾತಿ ಜನರ ಕೀಳುತನವನ್ನು ವೈಯಕ್ತಿಕವಾಗಿ ತಮಗೆ ಅನ್ವಯಿಸಿಕೊಂಡು ಹೇಳುತ್ತಾರೆ. 'ಮುಟ್ಟಲಂಜುವೆ ನಿಲ್ವೆ ದೂರಕೆ ಹೋಗಿ' ಎಂಬುದನ್ನು ಇಲ್ಲಿ ಗಮನಿಸಬೇಕು. ಆದರೆ ಅದೇ ಕ್ಷಣದಲ್ಲಿ ತಮ್ಮನ್ನು ಹೀನವೆಂದು ತಿರಸ್ಕರಿಸಲ್ಪಟ್ಟ ವ್ಯಕ್ತಿಯಾಗಿಯೂ ಆರೋಪಿಸಿಕೊಂಡು ಹಕ್ಕನ್ನು ಪ್ರತಿಪಾದಿಸುತ್ತಾರೆ.

"ನೋಡು ಸಮಾಜಕ್ಕೆ ನಾವುರುಗೋಲು
ನೋಡಣ್ಣ/ದಮ್ಮಯ್ಯ ಕೊಡು ಸರಿ ಪಾಲು
ಬೇಡಿದಾಗಲೇ ಬಿಟ್ಟುಕೊಡುವುದು ಮೇಲು"[೩]

–ಪಂಜೆ ಮಂಗೇಶರಾಯ.

ಇಲ್ಲಿ ಸ್ವರಾಜ್ಯ ಮೂಡಿ ಬರಬೇಕಾದರೆ ಅದಕ್ಕೆ ದಲಿತರ ಶಕ್ತಿ ಅತಿ ಮಹತ್ವದ್ದು ಮತ್ತು ಬೆಲೆಯುಳ್ಳದ್ದು. ಹೀಗಾಗಿ ಸಮಪಾಲು ಬೇಕು, ಎಂಬ ಹಕ್ಕು ಪ್ರತಿಪಾದನೆಯ ವಿಷಯ ಬರುತ್ತದೆ.

"ಎಲೆ ನಾಗಣ್ಣ ಹೇಳಲೋ ನಿನ್ನಾ
ತಲೆಯಲಿ ಕನ್ನವಿಹ ನಿಜವನ್ನು
ಬಲು ಬಡವರಿಗೆ ಕೊಪ್ಪರಿಗೆಯ ಚಿನ್ನಾ ತಾ, ತಾ, ತಾ, ತಾ
ಬರಿ ಮೈ ತಣ್ಣಗೆ ಮನದಲ್ಲಿ ಬಿಸಿ ಹಗೆ
ಎರಡಳೆ ನಾಲಗೆ ಇದ್ದರೂ ಸುಮ್ಮಗೆ
ಎರಗುವೆ ನಿನಗೆ ಆಗಲೆ ಹೊರಗೆ
ಪೋ। ಪೋ । ಪೋ । ಪೋ ।"[೪]

–ಪಂಜೆ ಮಂಗೇಶರಾಯ.

'ನಾಗರಹಾವು' ಎಂಬ ಶಬ್ದ ಚಿತ್ರ ಸೃಷ್ಟಿಸುವ ಅರ್ಥ ಜಾನಪದೀಯ ಅಂಶಗಳನ್ನು ಒಳಗೊಂಡಿದೆ. ಜಾನಪದದಲ್ಲಿ ನಾಗದೇವತೆಗೆ ವಿಶಿಷ್ಟ ಸ್ಥಾನವಿದೆ. ಹೀಗಾಗಿ ಇಲ್ಲಿ ಸಾಮಾಜಿಕ ಸಮಾನತೆ ಇರುವಂತೆ ನೋಡಿಕೊಳ್ಳಲು ನಾಗದೇವತೆಗೆ ಅರಿಕೆ ಮಾಡಿಕೊಳ್ಳಲಾಗಿದೆ. ಒಟ್ಟಿನಲ್ಲಿ ವೈಚಾರಿಕ ಚಿಂತನೆಯಿಂದ ಹೊರಹೊಮ್ಮುವ ಸಮತಾವಾದದ ಅಪೇಕ್ಷೆ ಇಲ್ಲಿರುವುದನ್ನು ಗಮನಿಸಬೇಕು.

ಪೈಯವರು ಮೊದಮೊದಲಿಗೆ ಭವ್ಯ ಭಾರತದ ಕಲ್ಪನೆಯಲ್ಲಿ ಭಾವಾವೇಶಕ್ಕೆ ಒಳಗಾದವರಂತೆ ಕವಿತೆ ರಚಿಸಿದ್ದು ಕಂಡು ಬರುತ್ತದೆ. 'ಭಾರತಾಂಬೆಯ ಮಹಿಮೆ' ಎಂಬ ಕವಿತೆಯಲ್ಲಿ–

"ಭಾರತದ ಮಂಗಲವು ಭುವನವಲ್ಲಭನೊಲವು
ಭಾರತ ಸಮುಚ್ಚಯವು ಶಾಂತಿಗಾಶ್ರಯವು
ಭಾರತದ ಜನಕುಲವು ಭೂವಿಯ ಬಳಗಕೆ ಒಲವು
ಭಾರತಾಂಬೆಯ ಭಕ್ತಿ ನನಗಾತ್ಮ ಶಕ್ತಿ"[೫]

–ಗೋವಿಂದ ಪೈ

ಈ ಕವಿತೆಯಲ್ಲಿ ಇಡಿ ದೇಶವನ್ನೇ ಅಖಂಡವಾಗಿ ಪ್ರೀತಿಸುವ ಕವಿಯ ಮಾನವತಾವಾದಿ ದೃಷ್ಟಿಯನ್ನು ಗುರುತಿಸಬಹುದು. ಆನಂತರದಲ್ಲಿ ಭಾರತದ ವಾಸ್ತವತೆಯನ್ನು ಅರ್ಥಮಾಡಿಕೊಂಡು ಕಳವಳಿಸಿ ಹುತಾತ್ಮ ಗಾಂಧಿ ಇನ್ನೂ ಇರಬೇಕಾಗಿತ್ತು ಎಂದು ತೊಳಲಾಡುತ್ತಾರೆ.

"ಇನ್ನಿನಿಸು ನೀ ಮಹಾತ್ಮಾ ಬದುಕಬೇಕಿತ್ತು ।
ಈಗ ಭಾರತಕತ್ಯಗತ್ಯವಿದೆ ನಿನ್ನ;
ಬಿರುಗಾಳಿಗೊಲೆವ ಹಡಗಂತಿಹುದ ದಾಸತ್ತು
ನಿನ್ನ ಹೊರತಾರೊಯ್ಯು ರೇವಿನೊಳದನ್ನ"[೬]

–ಗೋವಿಂದ ಪೈ

ಭಾರತ ಬ್ರಿಟಿಷ ಗುಲಾಮಗಿರಿಯಿಂದ ಬಿಡುಗಡೆಗೊಂಡ ಐದಾರು ತಿಂಗಳುಗಳಲ್ಲಿ ಗಾಂಧೀಜಿಯವರ ಕೊಲೆಯಾದಾಗ ಬರೆದ ಪದ್ಯವಿದು. ಭಾರತವು ಉಜ್ವಲವೆಂದು ಘೋಷಿಸಿದ ಅನಂತರ ವಾಸ್ತವದ ಅರಿವಾಗಿ ಬದಲಾವಣೆಯ ಹಾಗೂ ಮಾನವೀಯತೆಯ ಹ–ರಿಕಾರ ಮಹಾತ್ಮಾ ಗಾಂಧೀಜಿ ಇನ್ನೂ ಸ್ವಲ್ಪ ಕಾಲ ಬದುಕಬೇಕಾಗಿತ್ತು ಎಂದು ಹಲಬುತ್ತಾರೆ. ಜಗತ್ ಪ್ರೀತಿ, ಆತ್ಮಶಕ್ತಿ ಹೊಂದಿದ್ದ ಗಾಂಧಿ ಭಾರತದಲ್ಲಿ ತುಂಬಿಕೊಂಡಿರುವ ಅಸಮಾನತೆ, ಸ್ವಾರ್ಥಪರತೆ, ನಾಸ್ತಿಕತೆ ಅಸೂತ್ರತೆ ಮೊದಲಾದವುಗಳ ಬಿರುಗಾಳಿಗೆ ಸಿಕ್ಕಿದ ಹಡುಗಿನಂತೆ ಆಗಿರುವ ಸ್ಥಿತಿಯಲ್ಲಿ ಅದನ್ನು ದಡ ಮುಟ್ಟಿಸಬಲ್ಲ ಶಕ್ತಿ ಗಾಂಧಿಯಲ್ಲಿತ್ತು. ಹೀಗಾಗಿ ಅವರು 'ಇನ್ನಿನಿಸು ದಿನ ಬದುಕಬೇಕಿತ್ತು' ಎಂಬ ಆಶಯ ವ್ಯಕ್ತಪಡಿಸುತ್ತಾರೆ.

ಗೋವಿಂದ ಪೈ ಅವರ 'ಹೊಲೆಯನು ಯಾರು?' ಕವನ 12ನೇ ಶತಮಾನದ ಶರಣ ಬಸವಣ್ಣನವರ 'ಕೊಲ್ಲುವವನೆ ಮಾದಿಗ, ಹೊಲಸು ತಿನ್ನುವವನೆ ಹೊಲೆಯ' ಎನ್ನುವ ವಚನದ ನೇರ ಪ್ರಭಾವ ಈ ಕವಿತೆಯ ಮೇಲಾಗಿರುವುದನ್ನು ಕಾಣಬಹುದು. ಗುಟ್ಟನ್ನು

ಕದ್ದುಕೇಳುವವನು, ಗಂಡ ಹೆಂಡಿರನ್ನು ಬೇರೆ ಮಾಡುವವನು, ಚಾಡಿ ಕೋರ, ಒಣಹರಟೆ ಹೊಡೆಯುವವನು, ಪ್ರಾಣಿಹಿಂಸೆ ಮಾಡುವವನು, ಮದ್ಯಪಾನಿ, ಜೂಜುಕೋರ ಮುಂತಾದ ಕೆಟ್ಟಗುಣಗಳನ್ನು ಹೊಂದಿದವನೇ ಹೊಲೆಯ. ವಿನಃ ಯಾವನೂ ಹುಟ್ಟಿನಿಂದ ಹೊಲೆಯನಲ್ಲ, ಎನ್ನುವ ಪೈ ಅವರ ವಿಚಾರ ಅಂತಿಮವಾಗಿ ಸಾಮೂಹಿಕ ಸ್ವಾಸ್ಥ್ಯದ ಅರಿವನ್ನು ಉಂಟುಮಾಡುತ್ತದೆ.

ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸುವ ಪೈಯವರು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಮಸ್ಯೆಗಳನ್ನು ಕೂಡಾ ತೀವ್ರವಾಗಿ ವಿವೇಚಿಸಿದ್ದಾರೆ. 1945ರಲ್ಲಿ ಅಮೇರಿಕಾವು ಜಪಾನಿನ ಹಿರೋಷಿಮಾದ ಮೇಲೆ ಅಟಂ ಬಾಂಬನ್ನು ಎಸೆದು ಲಕ್ಷಗಟ್ಟಲೆ ಜನ ಆಹುತಿ ಆದಾಗ ಅದನ್ನು ಕೇಳಿ ವಿಷಾದ ವ್ಯಕ್ತಪಡಿಸುವ ಪೈಯವರು 'ಹಿರೋಷಿಮಾ' ಎಂಬ ಕವಿತೆಯನ್ನು ಬರೆದದ್ದು ಗಮನೀಯ. ಅದರಂತೆ 1944ರಲ್ಲಿ ಬರಗಾಲದ ಪರಿಣಾಮವಾಗಿ ಬಂಗಾಲದಲ್ಲಿ 25ಲಕ್ಷ ಜನ ಸಾವಿಗೀಡಾಗಿ 10 ಲಕ್ಷ ಜನ ಇತರ ರೋಗರುಜಿನುಗಳಿಗೆ ತುತ್ತಾಗಿ ಸತ್ತ ಸಂದರ್ಭದಲ್ಲಿ ಪೈಯವರು ಆ ಕುರಿತು ತಳಮಳ ವ್ಯಕ್ತಪಡಿಸಿದರು. ಅದು ಅವರಲ್ಲಿರುವ ಮಾನವೀಯತೆಯನ್ನು ಎತ್ತಿ ತೋರಿಸುತ್ತದೆ.

"ಸತ್ತರೇ ಅಕಟ ! ಮುವತ್ತಯಿದು ಲಕ್ಷ
ಬಂಗಾಲಿದೊಳಗೆಮ್ಮ ಕಂಗಾಲ ಬಳಗಂ?

ಮಾನವತಾವಾದವನ್ನು ಹಂಬಲಿಸುವ ಆಶಯ ಅವರ ಕವಿತೆಗಳಲ್ಲಿ ಪುಟಿನೆಗೆಯುತ್ತದೆ. ಪ್ರತಿ ಕವನದಲ್ಲಿಯೂ ಪೈಯವರು "ಮಾನವೀಯತೆಗೆ ಹೆಚ್ಚು ಬೆಲೆ ಕೊಟ್ಟಿದ್ದಾರೆ. ಅವರ ಹಲವು ಕವನಗಳಲ್ಲಿ ಆ ಭಾವನೆ ವ್ಯಕ್ತವಾಗುತ್ತದೆ. ಆಟಂಬಾಂಬು ಹಿರೋಷಿಮಾ, 35,00,000 ಶೂದ್ರರ್ಷಿಕ ವರ್ಷ, ಕಲ್ಲುಕಟಿಗ, ಮಾತಂಗ, ವಾಸವದತ್ತೆ, ಅಂದಿನಿಂದಾಕೆ ನಕ್ಕಿಲ್ಲ ಅತ್ತಿಲ್ಲ, ಪಶ್ಚಾತಾಪ ಇತ್ಯಾದಿ ಕವನಗಳು ಅದಕ್ಕೆ ಸಾಕ್ಷಿ. ವಿಶ್ವಕಾರುಣ್ಯ, ವಿಶ್ವಮಾನವತೆಗಳ ದೃಷ್ಟಿಯನ್ನು ಇವು ವ್ಯಕ್ತಗೊಳಿಸುತ್ತವೆ. ಎಲ್ಲ ಧರ್ಮಗಳು, ಎಲ್ಲ ವರ್ಣಗಳು, ಎಲ್ಲ ಜಾತಿಗಳು ಸಮಾನವಾದವುಗಳು ಎಂಬ ಉದಾರ ನೀತಿ ಗೋವಿಂದ ಪೈಯವರದಾಗಿತ್ತು."[7]

1921ರಲ್ಲಿ ಪ್ರಕಟವಾದ ಬಿ. ಎಂ.ಶ್ರೀಯವರ 'ಇಂಗ್ಲಿಷ್ ಗೀತೆಗಳು' ಕನ್ನಡ ನವೋದಯ ಕಾವ್ಯದಲ್ಲಿ ಲವಲವಿಕೆ ಮತ್ತು ಉಲ್ಲಾಸವನ್ನು ತುಂಬಿತು. 'ತಮಸೋಮಾ ಜೋತಿರ್ಗಮಯ' ಎಂಬ ಪರಂಪರೆಯ ನುಡಿ ಅವರ 'ಕರುಣಾಳು ಬಾ ಬೆಳಕೆ' ಕವನದಲ್ಲಿ ಪ್ರತಿಫಲಿತಗೊಂಡಿದೆ. ದುಃಖ ಸೇತುವೆ, ನನ್ನ ಪ್ರೇಮದ ಹುಡುಗಿ, ಮುದ್ದಿನ ಕುರಿಮರಿ ಮೊದಲಾದ ಕವನಗಳಲ್ಲಿ ಸಾಮಾನ್ಯ ಮನುಷ್ಯನ ಭಾವನೆಗಳಿಗೆ ಸುಖನೋಡ ಬಯಸಿದೆ. ಅವಳ ತೊಡಿಗೆ ಇವಳಿಗಿಟ್ಟು ಹಾಡಬಯಸಿದೆ' ಎನ್ನುವಲ್ಲಿ ಅವರು ಕಾವ್ಯದ –ದುಃಖಗಳಿಗೆ, ಬೇಸರ ಹಂಬಲಗಳಿಗೆ ಅಭಿವ್ಯಕ್ತಿ ದೊರೆತಿದೆ. ಅವರ 'ಚೋಳ ಕನ್ಯೆಯರು' ಕವಿತೆಯಂತೂ ಮಾನವೀಯ ಮೌಲ್ಯಗಳ ಹಿನ್ನೆಲೆಯನ್ನೆ ಹೊಂದಿದೆ.

ಮಾನವೀಯ ಅಂತಃಕರಣದ ಮೂಲ ಧಾತುವನ್ನು ಕಾವ್ಯದ ನೇಯ್ಗೆಯಲ್ಲಿ ಸೇರಿಸಲಾಗಿದೆ. ಭಾರತೀಯ ಮನಸ್ಸುಗಳ ಪ್ರಧಾನ ಭಾವವೆ ಆಗಿರುವ ಮಾನವೀಯತೆ ಮತ್ತು ಸಮದುಃಖಿ ಸ್ಪಂದನ ಇಲ್ಲಿ ವಿಸ್ತಾರತೆ ಪಡೆದಿದೆ. 'ಮನೆ ದೂರ' ಕವಿತೆಯಲ್ಲಿ ಅಸಹಾಯಕ ಹೆಣ್ಣೊಬ್ಬಳು ಮೋಸಕ್ಕೊಳಗಾಗಿ ಆತ್ಮಹತ್ಯೆ ಮಾಡಿಕೊಂಡಾಗ ಕಳವಳ ಪಡುವ ಕವಿಯಲ್ಲಿ ಕರುಣೆಯನ್ನೆ ಕಾಣುವ ಆರ್ಯ ಧರ್ಮ, ಆರ್ಯ ಜನಗಳ ಅಂತಃಕರಣ ಎಲ್ಲಿ ಅಡಗಿತ್ತು ಎಂದು ಪ್ರಶ್ನಿಸುತ್ತಾರೆ.

ನವೋದಯ ಕವಿಗಳು ಆತ್ಮಜಿಜ್ಞಾಸೆ ಮತ್ತು ಧಾರ್ಮಿಕ ಶ್ರದ್ಧೆಗಳ ಮೂಲಕ ಮಾನವೀಯತೆ ಅಥವಾ ಮಾನವ ಧರ್ಮಗಳ ನೆಲೆಗಳನ್ನು ಗುರುತಿಸುತ್ತಾರೆ. ಇಂತಹ ದಾರ್ಶನಿಕ ಮನೋಭೂಮಿಕೆಯ ಕವಿಗಳಲ್ಲಿ ಡಿ. ವ್ಹಿ. ಜಿ ಯವರ ಹೆಸರು ಮಹತ್ವದ್ದಾಗಿದೆ. 'ವಸಂತ ಕುಸುಮಾಂಜಲಿ', 'ಶ್ರೀ ರಾಮ ಪರಿಕ್ಷಣಂ', 'ವಿದ್ಯಾರಣ್ಯ ಸ್ತುತಿ', 'ನಿವೇದನೆ', 'ಅಂತಃಪುರ ಗೀತೆ' ಸಂಕಲನಗಳಲ್ಲಿ ಅವರ ಈ ಮನೋಭೂಮಿಕೆಯನ್ನು ಮನಗಾಣಬಹುದು.

ಸ್ವತಂತ್ರದ ಬದುಕು, ಪ್ರಯತ್ನಶೀಲತೆ ಮನುಷ್ಯನಿಗೆ ಇರಬೇಕು ಎಂದು ಕವಿ ಡಿ.ವ್ಹಿ.ಜಿಯವರು ಅಭಿಪ್ರಾಯಪಡುತ್ತಾರೆ. 'ಹಳೆ ಬೇರು ಹೊಸ ಚಿಗುರು ಕೂಡಿರಲು ಮರ ಸೊಗಸು' ಎಂಬ ಪ್ರಸಿದ್ಧ ಕವನದಲ್ಲಿ ಡಿ.ವ್ಹಿ.ಜಿಯವರು ತಮ್ಮ ಜೀವನದ ದೃಷ್ಟಿಕೋನವನ್ನು ಎತ್ತಿ ತೋರಿದ್ದಾರೆ. ಮಾನವನ ಉನ್ನತೀಕರಣದ ಬಗ್ಗೆ ವಿಶಾಲವಾದ ಅನುಭಾವ ಸಿದ್ಧಾಂತಗಳಿಂದ ನೇಯಲ್ಪಟ್ಟಿರುವ ಕವಿತೆ ಅನುಭಾವ, ಅನುಭವಗಳ ರಸ ಸಿದ್ಧಿಯನ್ನು ಆಧ್ಯಾತ್ಮದ ಹಿನ್ನೆಲೆಯಲ್ಲಿ ಪಡೆದುಕೊಳ್ಳುವ ರೀತಿ. ಡಿ.ವಿ.ಜಿಯವರದ್ದಾಗಿದೆ. ಈ ವಿಚಾರ ಸರಣಿಯೂ ಕೂಡ ಮಾನವತಾವಾದ ಧರ್ಮದಿಂದ ಭಿನ್ನವಾದುದ್ದಲ್ಲ.

ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಕಾವ್ಯ ಭಾರತೀಯ ಸಂಸ್ಕೃತಿಯಲ್ಲಿನ ಆಳವಾದ ವಿಶ್ವಾಸಗಳನ್ನು ವ್ಯಕ್ತಪಡಿಸುತ್ತದೆ. ಬಹು ಸರಳವಾದ ಭಾಷೆಯಲ್ಲಿ ರಾಗ ಸಂಯೋಜಿಸಿಯೆ ಕವಿತೆಗಳನ್ನು ಬರೆದ ಮಾಸ್ತಿಯವರ ಕಾವ್ಯಗಳಲ್ಲಿ ಸಾಕಷ್ಟು ವೈವಿಧ್ಯತೆಯಿದ್ದರೂ ಅಂತಿಮವಾಗಿ ಸಮರ್ಪಣಾ ಮನೋಭಾವವನ್ನೆ ಪ್ರತಿನಿಧಿಸುತ್ತವೆ.

"ತಿರುಗಿ ನೋಡಲು ಮೇಳಲ ಮೆಲ ನಾ ನಡೆದಡಿಯ
ಗುರುತಿಸ ನೋಡನಿಹುದು ನಿನ್ನಡಿಯ ಗುರುತು
ಹರಿದಾರಿಗಳನು ಕಾರಿನಲಿ ಬೇಸರ ಪಡದೆ
ಕರುಣಾಳು ಎನ್ನೊಡೆಯ ನಡೆದು ನೀನು"[೮]

–ಮಾಸ್ತಿ

ಯಾವುದೇ ವ್ಯಕ್ತಿ ಆತಂಕಪಡದೇ ಬದುಕಬೇಕು. ಮತ್ತು ಸಾರ್ಥಕ್ಯ ಪಡೆಯಬೇಕು ಎಂಬುದು ಮಾಸ್ತಿಯವರ ಆಶಯ. ಮಾಸ್ತಿಯವರು ವಿಶೇಷವಾಗಿ ಕಥನ ಕಾವ್ಯಗಳಿಗೆ ಮಹತ್ವ ನೀಡಿದ್ದಾರೆ. ಅವರ ಕಥನ ಕವನಗಳಲ್ಲಿ 'ಗೌಡರ ಮಲ್ಲಿ' ವಿಶಿಷ್ಟತನದಿಂದ ಕೂಡಿದೆ. ವಿದುರಗೌಡ ಕೆಳಜಾತಿಯ ಮಲ್ಲಿಯ ಮೇಲೆ ಮೋಹಗೊಳ್ಳುತ್ತಾನೆ. ಆ ಮೋಹ ಬರಿ ಕಾಮದಿಂದ ಕೂಡಿದುದಲ್ಲ. ಜೀವನದ ಕೊನೆಯವರೆಗೂ 'ಗೌಡ'

ಮತ್ತು 'ಮಲ್ಲಿ' ಇಬ್ಬರೂ ಗಂಡ–ಹೆಂಡಿರಂತೆಯೇ ಬದುಕುತ್ತಾರೆ. ಸಾಮಾನ್ಯವಾಗಿ ಮಾಸ್ತಿಯವರ ಕಥನ ಕವನಗಳ ಕ್ರಿಯೆ ನಿಧಾನಗತಿಯಿಂದ ಕೂಡಿದ್ದು, ಕುತೂಹಲದ ಕತೆಗಳನ್ನು ಹೇಳುವುದಕ್ಕಿಂತ ಆ ಕತೆಯಲ್ಲಿ ಬರುವ ಮಾನವೀಯ ಅಂಶಗಳು ಮತ್ತು ಪಾತ್ರಗಳು ಅವರ ಆಸಕ್ತಿಯ ವಿಷಯವಾಗುತ್ತವೆ. ಜನ ಸಾಮಾನ್ಯರ ಒಳ್ಳೆಯತನ, ನಿಷ್ಠೆ ಇವು ಅವರ ಕವನಗಳಲ್ಲಿ ಕಾಣಿಸಿಕೊಳ್ಳುತ್ತವೆ. ಇವೆಲ್ಲ ಧಾರ್ಮಿಕ ಶ್ರದ್ಧೆಯ ನೆಲೆಯಲ್ಲಿಯೇ ಅಂತಿಮ ಸತ್ಯವನ್ನು ಕಾಣುತ್ತವೆ. 'ಶ್ರೀರಾಮ ಪಟ್ಟಾಭಿಷೇಕ' ಕಥನ ಕಾವ್ಯವಂತೂ ಮಾನವನ ಪರಿಪೂರ್ಣತೆಯ ಸಾಕಾರವನ್ನು ಪಡೆದುಕೊಳ್ಳುತ್ತದೆ. ಅದೇ ರೀತಿ 'ರಾಮನವಮಿ' ಕಥನ ಕವನವೂ ದೈವ ಸಾಕ್ಷಾತ್ಕಾರದ ದಾರಿಯಲ್ಲಿಯೇ ಸಾಗುತ್ತದೆ.

ಬೇಂದ್ರೆಯವರು ತಮ್ಮ 'ಕುರುಡು ಕಾಂಚಾಣ' ಕವಿತೆಯಲ್ಲಿ ತಿಳಿಸಿದ್ದಾರೆ. ಶೋಷಣೆಯ ವಿವರಗಳನ್ನು ಶಕ್ತಿಯುತವಾಗಿ ಬಿಚ್ಚಿಡುತ್ತಾ ಶೋಷಣೆಯ ಕ್ರೌರ್ಯವನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಇಂಥಹ ಶೋಷಣೆ ತಾನೆ ತಾನಾಗಿಯೇ ಸವೆದು ಹೋಗುವ ಸಂಭಾವ್ಯತೆಯನ್ನು ಕೂಡಾ ಕವಿ ಕವಿತೆಯ ಕೊನೆಯಲ್ಲಿ ಹೇಳುತ್ತಾರೆ.

"ಹ್ಯಾಂಗಾರೆ ಕುಣಿಕುಣಿದು
ಮಂಗಾಟ ನಡೆದಾಗ
ಅಂಗಾತ ಬಿತ್ತೋ ಹೆಗಲಲಿ ಎತ್ತೋ"[೯]

ಎನ್ನುವ ಮೂಲಕ ಆ ಸಂಭಾವ್ಯತೆಯನ್ನು ಸ್ಪಷ್ಟಪಡಿಸುತ್ತಾರೆ. ನವೋದಯದ ಕವಿಗಳು ಆದರ್ಶವಾದಿ ಸಿದ್ಧಾಂತದ ಮಾನವತಾವಾದ ಭವಿಷ್ಯದಲ್ಲಿ ಅದರ ಸಾಕಾರ ರೂಪ ಮೂಡುವದರಲ್ಲಿ ಹೆಚ್ಚಿನ ವಿಶ್ವಾಸ ತಾಳುತ್ತಾರೆ. ಅವರ ಆಧ್ಯಾತ್ಮಿಕ ಚಿಂತನೆ ಮತ್ತು ಸಾತ್ವಿಕ ಪಥ ಆ ನಂಬಿಕೆಗಳನ್ನು ಬಲಪಡಿಸುತ್ತದೆ. ಬೇಂದ್ರೆಯವರ ಕಾವ್ಯ ಸೃಷ್ಟಿಗೂ ಈ ಮಾತು ಅನ್ವಯಿಸುತ್ತದೆ. 'ಪುಟ್ಟ ವಿಧವೆ','ಹೆಣದ ಹಿಂದೆ','ಭೂಮಿ ತಾಯಿಯ ಚೊಚ್ಚಲ ಮಗ','ಯಜ್ಞ', 'ಮನುವಿನ ಮಕ್ಕಳು', 'ಅದೂವರೆಗೂ', 'ನರಬಲಿ', 'ಮೂವತ್ತಮೂರು ಕೋಟಿ' ಮೊದಲಾದ ಕವಿತೆಗಳಲ್ಲಿಯೂ ಕೂಡಾ ಬೇಂದ್ರೆಯವರ ಮನೋಭೂಮಿಕೆ ಸ್ಪಷ್ಟಗೊಳ್ಳುತ್ತದೆ. ಮಾನವೀಯತೆಗೆ ಸಂಬಂಧಿಸಿದಂತೆ ಅವರ ಅಂತರಂಗ ಸದಾ ಮಿಡಿಯುತ್ತಿರುವ ಅಂಶ ಅವರ ಅನೇಕ ಕವಿತೆಗಳಲ್ಲಿ ಕಂಡುಬರುತ್ತದೆ. ಧಾರ್ಮಿಕ ಶ್ರದ್ಧೆ, ಆಧ್ಯಾತ್ಮಿಕ ನಿಷ್ಠೆಗಳ ಜೊತೆಗೆ ಸಮಾಜದ ಬಗ್ಗೆ ಇರುವ ಅಂತಃಕರಣ ಕಾಳಜಿಗಳು ಅವರನ್ನು ಮಾನವತಾವಾದಿಯ ನೆಲೆಗೆ ಕೊಂಡೊಯ್ಯುತ್ತವೆ. ಅವರು ವ್ಯಕ್ತಪಡಿಸುವ ವಿಸ್ಮಯ ಮತ್ತು ನಿರೀಕ್ಷೆಗಳು ಕೂಡಾ ಅಂಥಹ ನಿಲುವೊಂದನ್ನು ಸ್ಪಷ್ಟಪಡಿಸುತ್ತವೆ. 'ಇದು ಬರೀ ಬೆಳಗಲ್ಲೊ ಅಣ್ಣ' ಎನ್ನುವ ನುಡಿಯಲ್ಲಿ ಈವರೆಗೆ ವಿವೇಚಿಸಲಾದ ಆಶಯದ ಅಭಿವ್ಯಕ್ತಿಯನ್ನು ಕಾಣಬಹುದಾಗಿದೆ.

ನವೋದಯ ಕಾಲದ ಪ್ರಮುಖ ಕವಿಗಳಲ್ಲಿ ಕಾಣಿಸಿಕೊಂಡವರೆಂದರೆ ಕುವೆಂಪು,

"ಧನಿಕರ ಮನೆಗಳು ಒಂಡೆದೆ ನಿಂತಿವೆ
ಬಡವರ ಗುಡಿಸಲು ಒಂದೆಡೆ ನಿಂತಿವೆ"[೧೦]

ಇಲ್ಲಿ ಕವಿ ಕುವೆಂಪು ಅವರು ಸಮಾಜದಲ್ಲಿನ ಶ್ರೀಮಂತ–ಬಡವರೆಂಬ ಎರಡು ಭಾಗಗಳಲ್ಲಿಯ ಮೇಲು ಕೀಳು ಭಾವನೆಗಳನ್ನು ಎತ್ತಿ ತೋರಿಸುತ್ತ, ಕಾರ್ಮಿಕ ಮತ್ತು ಧನಿಕರ ಮಧ್ಯವಿರುವ ಮಹದಂತರವನ್ನು ತಿಳಿಸಿದ್ದಾರೆ. ಬಡವ ಮತ್ತು ಶ್ರೀಮಂತರ ನಡುವೆ ಇಷ್ಟೊಂದು ಅಂತರವಿರುವುದನ್ನು ಬಡವರು ಸಹಿಸಿಕೊಳ್ಳಲು ಸಾಧ್ಯವಿಲ್ಲ. ಒಂದು ದಿನ ಬಡವರೆಲ್ಲ ಸೇರಿ ಶ್ರೀಮಂತರ ವಿರುದ್ಧ ಬಂಡೇಳುತ್ತಾರೆ. ಆಗ ಶ್ರೀಮಂತರಿಗೆ ಶಾಂತಿ ಸಮಾಧಾನವೇ ಇಲ್ಲ ಎಂಬುದನ್ನು

"ಕಲ್ಕೀ। ಕಲ್ಕೀ । ಎನ್ನುತ ಚೀರಿ
ಕನಸೊಡೆದೆದ್ದೆ
ಇನ್ನೆಲ್ಲಿಯ ನಿದ್ದೆ"[೧೧]

ದುಡಿಯುವ ಜನ ದುಡಿಸಿಕೊಳ್ಳುವವರ ವಿರುದ್ಧ, ಬಡವರು ಶ್ರೀಮಂತರ ವಿರುದ್ಧ ಕೆಂಡಕಾರುತ್ತಾರೆ. ಈ ಬಡಜನತೆ ಬಂಡವಾಳಶಾಹಿಗಳಿಗೆ ಧಿಕ್ಕಾರ ಹಾಕಿದಾಗ ಹೊಸ ಸಮಾಜ ನಿರ್ಮಾಣವಾಗಬಹುದೆಂಬ ಆಶಾಭಾವನೆ ಕವಿಯಲ್ಲಿದೆ. ಮತ–ಧರ್ಮಗಳ ಪ್ರಭಾವವಿದ್ದ ತಮ್ಮ ಕಾಲದ ಸಾಮಾಜಿಕ ವ್ಯವಸ್ಥೆಯನ್ನು "ಬ್ರಾಹ್ಮನಾಯಿ–ಶೂದ್ರಕೋಳಿ" ಎಂಬ ಕವಿತೆಯಲ್ಲಿ ತೆರೆದಿಡುತ್ತಾರೆ.

"ಶೂದ್ರ ಕೋಳಿ ಮೇಯುತ್ತಿತ್ತು ಗಲ್ಲಿಯಲ್ಲಿ
ಬ್ರಾಹ್ಮಣ ನಾಯಿ ಹೊಂಚುತ್ತಿತ್ತು ಅಲ್ಲಿ ಇಲ್ಲಿ"

ಮತ–ಧರ್ಮಗಳ ಮೌಢ್ಯತೆಗಳನ್ನು ನಿರಾಕರಿಸದೇ ನಿಜವಾದ ಪ್ರಜಾಸತ್ತೆಯಾಗಲಿ, ಸಮಾಜವಾದವಾಗಲಿ, ಸಮಾನತೆಯನ್ನಾಗಲಿ ತರಲಿಕ್ಕೆ ಸಾಧ್ಯವಿಲ್ಲ. ಈ ಧ್ಯೇಯ– ಧೋರಣೆಯನ್ನೆ ಕುವೆಂಪು ಅವರು 'ಅನಿಕೇತನ' ಕವನದಲ್ಲಿ ಸ್ಪಷ್ಟಪಡಿಸಿದ್ದಾರೆ.

"ನೂರು ಮತದ ಹೊಟ್ಟ ತೂರಿ
ಎಲ್ಲ ತತ್ವದೆಲ್ಲೆ ಮೀರಿ
ನಿರ್ದಿಗಂತವಾಗಿ ಏರಿ"[೧೨]

ಮಾನವ ಅನಂತವಾಗುವ ಕವಿಯ ಆಸೆ ಅಸ್ತಿತ್ವಕ್ಕೆ ಬರುವುದಾದರೆ ಮನುಷ್ಯನು ಎತ್ತರದ ಮಟ್ಟಕ್ಕೆ ಏರಲು ಸಾಧ್ಯವಾಗುತ್ತದೆ. ಕುವೆಂಪು ಅವರ ಈ ಅಂಶಗಳನ್ನು ಗಮನಿಸಿದಾಗ ಮಾನವ ಸಮಾಜದಲ್ಲಿಯ ಜಾತಿ–ಮತಗಳು ಹೋಗಿ, ಸಮಾನತೆ ಬರಬೇಕು. ಆವಾಗ ಮಾತ್ರ ಮನುಷ್ಯರು ಮಾನವರಾಗಿ ಸಮಾನತೆಯಿಂದ ಬದುಕಲು ಸಾಧ್ಯವಾಗುತ್ತದೆ ಎಂದು ಹೇಳುವುದನ್ನು ನೋಡಿದಾಗ ಅವರಲ್ಲಿರುವ ಮಾನವೀಯ ಅಂಶಗಳ ಅರಿವಾಗುತ್ತದೆ.

“ನೂರು ದೇವರನ್ನೆಲ್ಲ ನೂಕಾಚೆ ದೂರ
ಭಾರತಾಂಬೆಯ ದೇವಿ ನಮಗಿಂದು ಪೂಜಿಸುವ ಭಾರ! “[೧೩]

– ಕುವೆಂಪು

ಕುವೆಂಪು ಅವರು ಭಾರತಾಂಬೆ ಒಬ್ಬಳೆ ನಮ್ಮ ದೇವತೆ, ಅವಳನ್ನೇ ಪೂಜಿಸೋಣ ಎನ್ನುವ ರಾಷ್ಟ್ರೀಯ ಪ್ರಜ್ಞೆಯೊಂದನ್ನು ಮೂಡಿಸಲು ಕರೆ ನೀಡುತ್ತಾರೆ.

“ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?”[೧೪]

‘ತನ್ನರಿವೇ ತನಗೆ ಗುರು’ ಎಂಬಂತೆ ನಮ್ಮೊಳಗಿರುವ ಎದೆಯೊಳಗಿನ ಸತ್ಯಕ್ಕಿಂತಲೂ ಮಿಗಿಲಾದ ಯಾವ ಶಾಸ್ತ್ರ ಸ್ಮೃತಿಗಳು ಇಲ್ಲ ಎನ್ನುತ್ತಾರೆ.

“ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ
ಬಡತನವ ಬುಡಮುಟ್ಟ ಕೀಳಬನ್ನಿ
ಮೌಢ್ಯತೆಯ ಮಾರಿಯನು ಹೊರದೂಡಲೈ ತನ್ನಿ
ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ
ಓ ಬನ್ನಿ ಸಹೋದರರೆ ಬೇಗ ಬನ್ನಿ”[೧೫]

ಇಡೀ ವಿಶ್ವದ ಧಾರ್ಮಿಕ ಸಂಕೇತಗಳನ್ನು ನಿರಾಕರಿಸುವ ಮೂಲಕ ವಿಜ್ಞಾನದ ಯುಗದಲ್ಲಿ ಹೊಸ ಮನುಷ್ಯರಾಗಿ ಬದುಕುವುದು ನಮ್ಮ ಮುಂದಿನ ಗುರಿ ಎನ್ನುವ ಕುವೆಂಪು ಅವರು ಪರಿವರ್ತನೆಗೊಳ್ಳುತ್ತಿರುವ ಕಾಲವನ್ನು ಕಂಡು ಉತ್ಸಾಹದಲ್ಲಿ ಹೊಸ ಬದುಕಿಗೆ ಆಹ್ವಾನ ನೀಡುತ್ತಾರೆ.

ಮಾನವೀಯತೆ, ಮಾನವತಾವಾದ ಮತ್ತು ಮಾನವೀಯ ಸಂಬಂಧಗಳನ್ನು ತಮ್ಮ ಕನಸುಗಳಲ್ಲಿ ಬಿಂಬಿಸುವುದರ ಮೂಲಕ ಕುವೆಂಪು ನವೋದಯ ಕಾವ್ಯಕ್ಕೆ ಮಾರ್ಗದರ್ಶಿಯಾಗುತ್ತಾರೆ. ‘ನೇಗಿಲಯೋಗಿ’, ‘ಕಿಟ್ಟಯ್ಯ’,’ಮಂಜನ್ನ ಹೇಳಿದ ಸ್ಥಳಗತಿ, ಘೂಲಿನಾಯಿ’ ಮುಂತಾದ ಕವಿತೆಗಳು ಮಾನವತಾವಾದದ ನೆಲೆಗಟ್ಟನಲ್ಲಿ ಗಮನ ಸೆಳೆಯುತ್ತವೆ. ಕುವೆಂಪು ಅವರು ಇಲ್ಲಿ ಎಲ್ಲ ಅಸಮಾನತೆಗಳ ವಿರುದ್ಧ ಧ್ವನಿಯೆತ್ತಿ ಮಾನವೀಯ ಎಳೆಯನ್ನು ಬಲಗೊಳಿಸುತ್ತಾರೆ.

ರಂ. ಶ್ರೀ. ಮುಗಳಿಯವರು ಕೂಡಾ ನವೋದಯದ ಕಾವ್ಯದಲ್ಲಿ ತೊಡಗಿಸಿಕೊಂಡ ಅನ್ವೇಷಕರಾಗಿದ್ದಾರೆ. ಡಿ. ಎಸ್. ಕರ್ಕಿ, ಸಿದ್ಧಯ್ಯ ಪುರಾಣಿಕ, ಪು.ತಿ.ನ. ಮೊದಲಾದವರು ನವೋದಯ ಭಾವಗೀತೆಗಳಲ್ಲಿ ಕೃಷಿ ಮಾಡಿದ್ದಾರೆ. ಕೆ. ಎಸ್. ನರಸಿಂಹಸ್ವಾಮಿ, ಜಿ. ಎಸ್. ಶಿವರುದ್ರಪ್ಪ ಮತ್ತು ಚೆನ್ನವೀರ ಕಣವಿಯವರು ಪ್ರಾರಂಭದಲ್ಲಿ ನವೋದಯ ಕಾವ್ಯಗಳಲ್ಲಿ ತಮ್ಮನ್ನು ಗುರುತಿಸಿಕೊಂಡರೂ ಮುಂದೆ ಭಿನ್ನದಾರಿಯನ್ನು ತುಳಿಯುತ್ತಾರೆ.

ನವೋದಯ ಕಾವ್ಯದಲ್ಲಿ ಬೇಂದ್ರೆ ಮತ್ತು ಕುವೆಂಪು ಅವರು ಮಿನುಗುವ ನಕ್ಷತ್ರಗಳಾಗಿ ಕಂಡುಬರುತ್ತಾರೆ. ಇವರಿಬ್ಬರ ಮಾರ್ಗಗಳು ವಿಭಿನ್ನವಾಗಿದ್ದರೂ ಗುರಿ ಒಂದೆ ಆಗಿತ್ತು. ಹೀಗಾಗಿ ಈ ಇಬ್ಬರು ಕವಿಗಳ ಮಾರ್ಗಗಳಲ್ಲಿ ಹಲವಾರು ಕವಿಗಳು ನವೋದಯ ಕಾವ್ಯವನ್ನು ಶ್ರೀಮಂತಗೊಳಿಸಿದರು. ಅಚಲವಾದ ಧಾರ್ಮಿಕ ಶ್ರದ್ಧೆ, ಆಧ್ಯಾತ್ಮದ ಅನ್ವೇಷಣೆ, ತಾತ್ವಿಕ ಚಿಂತನೆ ಮತ್ತು ವೈಚಾರಿಕ ಪ್ರಜ್ಞೆ ಇವೆಲ್ಲವುಗಳನ್ನು ಒಳಗೊಂಡ ನವೋದಯ ಕಾವ್ಯ ಏಕೀಕೃತ ಸಮಾಜದ ಕಲ್ಪನೆಯೊಂದನ್ನು ನೀಡುವ ಮೂಲಕ ಮಾನವತಾವಾದದ ಅಭಿವ್ಯಕ್ತಿಗೆ ಕಾರಣವಾಯಿತು.

ಒಟ್ಟಿನಲ್ಲಿ ನವೋದಯ ಕಾವ್ಯ ಪಾಶ್ಚಾತ್ಯ ಮತ್ತು ಭಾರತೀಯ ತತ್ವಗಳ ತಳಹದಿಯ ಮೇಲೆ ರೂಪಗೊಂಡು ಮಾನವತಾವಾದವನ್ನು ಪ್ರತಿನಿಧಿಸುವ ಹಿನ್ನೆಲೆಯಲ್ಲಿ ಮೂಡಿ ಬಂದಿತು. ಅದರ ಸಿದ್ಧಿ ಮಾನವೀಯತೆಯ ಅಡಿಯಲ್ಲೇ ಅಡಗಿದೆ. ಸಾಮಾಜಿಕ ಪ್ರಜ್ಞೆ, ರಾಷ್ಟ್ರೀಯ ಪ್ರಜ್ಞೆ ಮತ್ತು ಮಾನವೀಯ ಪ್ರಜ್ಞೆ ಬೆಳೆಸುವಲ್ಲಿ ನವೋದಯ ಕಾವ್ಯದ ಪಾತ್ರ ಮಹತ್ವದ್ದಾಗಿದೆ.

AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

**ಅಡಿ ಟಿಪ್ಪಣಿಗಳು:**

1. ಸಿ.ವೀರಣ್ಣ (ಸಂ): ಕನ್ನಡ ಪ್ರತಿಭಟನಾ ಕಾವ್ಯ, 1981, ಪು. 33.2.
2. ಸಿ.ವೀರಣ್ಣ (ಸಂ): ಕನ್ನಡ ಪ್ರತಿಭಟನಾ ಕಾವ್ಯ, 1981, ಪು. 87.
3. ಸಿ.ವೀರಣ್ಣ (ಸಂ): ಕನ್ನಡ ಪ್ರತಿಭಟನಾ ಕಾವ್ಯ, 1981, ಪು. 87.
4. ಪಂಜೆ ಮಗೇಶರಾಯ, 1931, ಪು. 32.
5. ಡಾ. ಪಾದೆಕಲ್ಲು ವಿಷ್ಣುಭಟ್ಟ (ಸಂ): ಗೋವಿಂದ ಪೈ, 1998, ಪು. 29.
6. ಅದೇ, ಪು. 31.
7. ಕಯ್ಯಾರ ಕಿಞ್ಞಣ್ಣ ರೈ: ಮಹಾಕವಿ ಗೋವಿಂದ ಪೈ, 1989, ಪು. 57.
8. ಎಲ್. ಎಸ್. ಶೇಷಗಿರಿರಾವ್ : ಮಾಸ್ತಿ ಜೀವನ ಮತ್ತು ಸಾಹಿತ್ಯ, 1992, ಪು. 174.
9. ದ.ರಾ.ಬೇಂದ್ರೆ : ಕುರುಡು ಕಾಂಚಾಣ, ನಾದಲೀಲೆ, 1996, ಪು. 38.
10. ಕುವೆಂಪು, ಕಲ್ಕಿ, ಪಾಂಚಜನ್ಯ, 1963, ಪು. 67.
11. ಅದೇ, ಪು. 71
12. ಕುವೆಂಪು : ಅನಿಕೇತನ, 1963, ಪು. 60.
13. ಕುವೆಂಪು ಸಮಗ್ರ ಕಾವ್ಯ : ಸಂಪುಟ–1 ಇಂದಿನ ದೇವರು, ಪು. 144.
14. ಕುವೆಂಪು ಸಮಗ್ರ ಕಾವ್ಯ : ಸಂಪುಟ–1 ಯಾವ ಕಾಲದ ಶಾಸ್ತ್ರವೇನು ಹೇಳಿದರೇನು, ಪು. 368.
15. ಕುವೆಂಪು ಸಮಗ್ರ ಕಾವ್ಯ: ಸಂಪುಟ–1 ಓ ಬನ್ನಿ ಸಹೋದರರೇ ಬೇಗ ಬನ್ನಿ, ಪು. 372.